ಮಾರನೆಯ ದಿನ ಅವರು ನನ್ನನ್ನು ಹಡಗುಕಟ್ಟೆಗೆ ಕರೆದೊಯ್ದರು. ಅಲ್ಲಿ ನನ್ನ ಜವಾಬ್ದಾರಿಯನ್ನು ಹಡಗಿನ ಮುಖ್ಯಸ್ಥನಿಗೆ ವಹಿಸಿದರು. ನಾನಲ್ಲಿಗೆ ತಲುಪಿದಾಗ ಬ್ರೂನೋ ಬ್ರಿಸಾಗೋದ ಬಂದರುಕಟ್ಟೆಯಲ್ಲಿ ನನಗಾಗಿ ಕಾಯುತ್ತಿದ್ದ. ಅವನು ನನ್ನನ್ನೊಮ್ಮೆ ಅಪ್ಪಿಕೊಂಡವನೇ ಬೆಲ್ಲಿಂಜೋನಾಕ್ಕೆ ಹೋಗುವ ಸಾರೋಟಿನತ್ತ ಹೆಜ್ಜೆ ಹಾಕಿದ. ನಾವು ಬೆಲ್ಲಿಂಜೋನಾ ತಲುಪುವ ಹೊತ್ತಿಗಾಗಲೇ ಅರಾಜಕತಾವಾದಿಗಳು ಅಲ್ಲಿಂದ ಹೊರಡಲು ಅನುವಾಗುತ್ತಿದ್ದರು. ಆ ವೇಳೆಗಾಗಲೇ ಇಟಲಿ ಸರ್ಕಾರ, ಸದರಿ ಅರಾಜಕತಾವಾದಿಗಳಿಗೆ ಸ್ವಿಟ್ಜರ್‌ಲ್ಯಾಂಡಿನ ಗಡಿ ಭಾಗದಲ್ಲಿ ನೆಲೆಯೂರಲು ಅವಕಾಶವೀಯದಂತೆ ದೂರು ಸಲ್ಲಿಸಿತ್ತು.

ಈ ಅರಾಜಕತಾವಾದಿಗಳು ಈ ಥರದ ಹಿಂಸಾತ್ಮಕ ಒತ್ತಡಕ್ಕೆ ಒಳಗಾಗುತ್ತಿದ್ದದ್ದು ಇದೇ ಮೊದಲೇನಾಗಿರಲಿಲ್ಲ, ಅನ್ನುವುದು ಅವರ ಮಾತುಕತೆಗಳಿಂದ ನನಗೆ ಮನವರಿಕೆಯಾಗಿತ್ತು. ಸುಮಾರು ನಲವತ್ತು ವರ್ಷಗಳ ಹಿಂದೆಯೇ ಪ್ರಖ್ಯಾತ ಅರಾಜಕತಾವಾದಿಯೆಂದು ಕರೆಯಲ್ಪಟ್ಟಿದ್ದ ಪೀಟ್ರೋಗೋರಿಯ ಕಾಲದಲ್ಲಿ ನಿರಾಶ್ರಿತರು ಬಲು ದೊಡ್ಡ ಸಂಖ್ಯೆಯಲ್ಲಿ ಲುಗಾನೋದಿಂದ ಹೊರ ಹಾಕಲ್ಪಟ್ಟಿದ್ದರು. ಸಾಲದೆಂಬಂತೆ, ಅವರಿಗೆ ಸ್ವಿಟ್ಜರ್‌ಲ್ಯಾಂಡಿನಲ್ಲಿ ನೆಲೆಸಲು ಬಿಡದಂತೆ ಹಾಗೂ ಆಶ್ರಯ ನೀಡದಂತೆ ಆಗಿನ ಇಟಲಿಯ ರಾಜ ಹಾಗೂ ಸರ್ಕಾರದಿಂದ ಸ್ವಿಸ್ ಪಾರ್ಲಿಮೆಂಟಿನ ಮೇಲೆ ಒತ್ತಡ ಹಾಕಲ್ಪಟ್ಟಿತ್ತು.

ನಾವಲ್ಲಿಗೆ ತಲುಪುತ್ತಿದ್ದಂತೆ ಬ್ರೂನೋ ಶೌಚಾಲಯವೊಂದಕ್ಕೆ ನನ್ನನ್ನು ಕರೆದೊಯ್ದು ನನ್ನ ಮೇಲಂಗಿಯನ್ನು ಬಿಚ್ಚಿಸಿದ. ಅದನ್ನು ಬಿಚ್ಚಿ ಕೈಯ್ಯಲ್ಲಿಡಿದುಕೊಂಡ ನಾನು ನನ್ನ ಬ್ಯಾಗಿನಲ್ಲಿದ್ದ ಮತ್ತೊಂದು ಮೇಲಂಗಿಯನ್ನು ಹಾಕಿಕೊಂಡೆ. ಆಚೆ ಬರುತ್ತಿದ್ದಂತೆ ಕಾರಿಡಾರಿನಲ್ಲಿ ನಿಂತಿದ್ದ ಅರಾಜಕತಾವಾದಿಯೊಬ್ಬ ನನ್ನ ಕೈಯ್ಯಲ್ಲಿದ್ದ ಮೇಲಂಗಿಯನ್ನು ಪುಸುಕ್ಕನೆ ಕಿತ್ತುಕೊಂಡು, ನನ್ನನ್ನು ಮೇಲಕ್ಕೆತ್ತಿ ಅಪ್ಪಿಕೊಂಡು, 'ನಿನ್ನ ಅಪ್ಪನಿಗೆ ಥ್ಯಾಂಕ್ಸ್ ಹೇಳು. ಹುಷಾರಾಗಿರೋದಕ್ಕೂ ಹೇಳು. ಜೊತೆಗೆ, ಯಾವ ಕಾರಣಕ್ಕೂ ಯಾವ ಸಂಗತಿನ್ನೂ ಬಿಟ್ಟುಕೊಡಬಾರದು ಅಂತಲೂ ಹೇಳು.' ಅಂದ. 'ಆಗಲಿ, ಹಂಗೇ ಮಾಡುತ್ತೇನೆ' ಅಂದೆ ನಾನು.

ಫ್ರೆಂಚ್ ಫ್ರೆಂಡ್

ಅದು 1944ರ ಬೇಸಿಗೆಯ ಕಾಲ. ಎರಡನೇ ಮಹಾಯುದ್ಧ ಸಮೀಪಿಸುತ್ತಿತ್ತು. ಆ ಹೊತ್ತಲ್ಲಿ ನಮ್ಮನ್ನು ಕಾಣಲೆಂದು ಫ್ರಾನ್ಸ್‌ನ ವ್ಯಕ್ತಿಯೊಬ್ಬ ಬರುತ್ತಾನೆ. ಅವನ ಹೆಸರು ಆಂಡ್ರೇಸ್ ಅಂತ. ಬಂದವನೇ ನನ್ನ ಅಪ್ಪನನ್ನು ಪ್ರೀತಿಯಿಂದ ಅಪ್ಪಿಕೊಂಡ. ನನ್ನ ಅಪ್ಪ ಮಾಂಟ್ಪೆಲ್ಲಿಯರ್‌ಗೆ ಕಟ್ಟಡದ ಕೆಲಸಕ್ಕಾಗಿ ವಲಸೆ ಹೋಗಿದ್ದಾಗ ಅವರಿಬ್ಬರಿಗೂ ಗೆಳೆತನವಾಗಿತ್ತು. ಅಲ್ಲಿ ಅವರನ್ನು ಹುಡುಗ ಮೇಸನ್‌ಗಳು ಅಂತ ಕರೆಯಲಾಗುತ್ತಿತ್ತು. ಅವರು ಪ್ರತಿದಿನ ನಿರ್ಮಾಣ ಹಂತದಲ್ಲಿದ್ದ ದೊಡ್ಡ ದೊಡ್ಡ ಕಟ್ಟಡಗಳ ಸಾರುವೆಗಳ ಮೇಲೆ ನಿಂತು ಕೆಲಸ ಮಾಡಬೇಕಾಗಿತ್ತು.

ಆ ದಿನಗಳಲ್ಲಿ, ಅಂದರೆ 1913ನೇ ಇಸವಿಯಲ್ಲಿ ಕಾರ್ಮಿಕರ ವಿಮೋಚನೆಗಾಗಿ, ಅವರ ಹಕ್ಕಿಗಾಗಿ ಹಾಗೂ ಗೌರವಯುತ ವೇತನಕ್ಕಾಗಿ, ಎಲ್ಲಕ್ಕಿಂತ ಮಿಗಿಲಾಗಿ ಕಾರ್ಮಿಕರು ಕೆಲಸ ಮಾಡುತ್ತಿದ್ದ ಕಾರ್ಖಾನೆಗಳು ಹಾಗೂ ಇತರೆ ಸ್ಥಳಗಳಲ್ಲಿ ಅವರ ಸುರಕ್ಷತೆಯ ಬಗ್ಗೆ ಉಗ್ರ ಹೋರಾಟಗಳು, ಚಳವಳಿಗಳು ನಡೆಯುತ್ತಿದ್ದ ಕಾಲ. ಹೋರಾಟಗಾರರ ಹಾಗೂ ಚಳವಳಿಗಾರರ ಮೇಲೆ ಪೊಲೀಸರನ್ನು, ಸೈನ್ಯ ಹಾಗೂ ಅಶ್ವದಳದವರನ್ನು ಛೂ ಬಿಟ್ಟು ದಬ್ಬಾಳಿಕೆ ನಡೆಸಲಾಗಿತ್ತು. ಆದಾಗ್ಯೂ, ಕಾರ್ಮಿಕ ಸಂಘಟನೆಗಳಿಗೆ ಒಂದಷ್ಟು ಪ್ರಯೋಜನಗಳೂ ಆಗಿದ್ದವು.

ಹೋರಾಟಗಳ ಕಾವು ತಗ್ಗಿದ ಮೇಲೆ ಅಪ್ಪ ಮತ್ತವನ ಗೆಳೆಯ ಆಂಡ್ರೇಸ್ ಮತ್ತೆ ಸಾರುವೆಗಳ